**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**
**ಪೀಠಾಸೀನ ಕೊಳ್ಳೇಗಾಲ**

**SPL.C 5080/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಗುರುಸ್ವಾಮಿ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಲಕ್ಷ್ಮಣ | 07.01.2026 |
| **ವಯಸ್ಸು** | : | 36 ವರ್ಷ | |
| **ವೃತ್ತಿ** | : | ಕೂಲಿ ಕೆಲಸ | **ಫ್ರಾ.ಸಾಃ** 07 |
| **ವಾಸ ಸ್ಥಳ** | : | ದೊಡ್ಡಿಂದುವಾಡಿ | **ಚಾ.ಸಾಃ** 19 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ನನಗೆ ಚಾಸಾ 1 ಗೊತ್ತು. ಮೃತ ಪವಿತ್ರಾ ಗೊತ್ತು. ಸುಮಾರು 1 ವರ್ಷದ ಹಿಂದೆ ಪವಿತ್ರಾ ಮೃತಪಟ್ಟಿರುತ್ತಾರೆ. ಚಾಸಾ 1 ರವರು ನನ್ನ ಬಳಿ ಬಂದು ನನಗೆ ಬರೆಯಲು ಬರುವುದಿಲ್ಲ, ಒಂದು ಪಿರ್ಯಾದಿಯನ್ನು ಬರೆದುಕೊಡು ಎಂದು ಕೇಳಿದರು. ನಾನು ಚಾಸಾ 1 ಹೇಳಿದಂತೆ ಪಿರ್ಯಾದಿ ವಿಚಾರಗಳನ್ನು ಬರೆದಿರುತ್ತೇನೆ. ಪಿರ್ಯಾದಿಯನ್ನು ನಿಪಿ 1 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಚಾಸಾ 1 ರವರು ಮೃತಳು ಕೂಲಿ ಕೆಲಸಕ್ಕೆ ಹೋದಾಗ ಆಕೆ ಮೂತ್ರ ವಿಸರ್ಜನೆಗೆಂದು ಹೋದಾಗ ವಿದ್ಯುತ್ ಸಂಪರ್ಕದಿಂದ ಮೃತಪಟ್ಟಿದ್ದಾಳೆ, ಎಂದು ನನಗೆ ತಿಳಿಸಿದರು.

**ಪಾಟೀ ಸವಾಲುಃ- ಶ್ರೀ ಎಂ.ಎಂ. ವಕೀಲರಿಂದ**

ನನಗೆ ಈ ಘಟನೆ ಬಗ್ಗೆ ಖುದ್ದು ಮಾಹಿತಿ ಇರುವುದಿಲ್ಲ. ಚಾಸಾ 1 ರವರು ನನಗೆ ಸುಳ್ಳು ಮಾಹಿತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ